## ಪ್ರಬಂಧ

ಗಾಳಿಯು ಮತ್ತಷ್ಟು ಜೋರಾಗಿ ಬೀಸುತ್ತಿದೆ. ಈ ಮರಗಳು ತಮ್ಮ ರೆಂಬೆ ಕೊಂಬೆಗಳನ್ನು ಅಲುಗಾಡಿಸುತ್ತಾ, ಬೀಸುತ್ತಾ ಏನು ಮಾತಾಡಿಕೊಳ್ಳುತ್ತವೆ? ನಿರ್ದಯವಾಗಿ ಮಳೆ ಸುರಿಯಿತು ಅಂತಲಾ? ಈಗಲಾದರೂ ಸುರಿಯಿತು ಅಂತಲಾ?

ಇಷ್ಟರೊಳಗೆ... ಛಟ್ ಛಟೀರ್... ಛಟ್ ಛಟ್ ಛಟೀರ್... ಅರ್ಜುನಾ ಫಲ್ಗುಣಾ ! ಎಂಥಹ ಶಬ್ದ ಅದು ! ಭೂಮಿಯ ಎದೆಗುಂಡಿಗೆ ಒಡೆದುಹೋಗುವ ಶಬ್ದ. ಎಂಟೆದೆಯವನ ಬೆನ್ನುಹುರಿಯೊಳಗೆ ನಡುಕ ಹುಟ್ಟಿಸುವ ಶಬ್ದ. ಯುದ್ಧ ಮಾಡುತ್ತಿರುವವನು ದಿಗ್ಭ್ರಮೆಯಿಂದ ತುಸು ಹೊತ್ತು ಕತ್ತಿವರಸೆಯನ್ನೇ ಮರೆತುಹೋಗುವ ಶಬ್ದ. ಕರುಣಾಮಯಿಯಂತಹ ಪ್ರಕೃತಿಯ ಕಣ್ಣಲ್ಲಿ ಕಾಣಿಸಿದ ತೀವ್ರವಾದ ಪ್ರಕೋಪ. ಎಲ್ಲಿ ಬಿದ್ದಿರಬಹುದು? ಯಾರಿಗೆ ಏನಾಗಿರಬಹುದು ? ಚಿಗುರೆಲೆಯನ್ನು ದಳ್ಳುರಿಯಲ್ಲಿ ಹಾಕಿದ ಹಾಗೆ, ಹಾಲುಣ್ಣುವ ಹಸುಗೂಸನ್ನು ಹೂತು ಹಾಕಿದ ಹಾಗೆ... ನಾನಂತೂ ಎಂದಿಗೂ ಮರೆಯಲಾಗದಂತಹ ಶಬ್ದ.

ಇಂತಹ ಒಂದು ಸಿಡಿಲಿನ ಹೊಡೆತಕ್ಕೆಯೇ ನಮ್ಮ ಕೊತ್ತೋಳ್ಳ ಸತ್ಯಂ ಬಲಿಯಾಗಿಬಿಟ್ಟ. ಇನ್ನೂ ಹದಿವಯಸ್ಸು ದಾಟಿರದಿದ್ದರೂ, ಇಬ್ಬರು ಅಣ್ಣಂದಿರನ್ನು ಪಕ್ಕಕ್ಕೆ ಕೂರಿಸಿ ತಾನೊಬ್ಬನೇ ಕೆಲಸ ಮಾಡುವಷ್ಟು ಶಕ್ತಿಯುಳ್ಳವನು. ಮಳೆ ಬಂದಿದ್ದೂ ಆಯಿತು. ಹೊರಪಾಗಿದ್ದೂ ಆಯಿತು. ಇನ್ನು ಎಮ್ಮೆಗೆ ಮೇವು ತರೋಣವೆಂದು ಹೊರಟ. ಅಷ್ಟೇ ! ಛಟ್... ಛಟ್... ಛಟೀರ್! ಮೋಸದ ಯಮಘೋಷ ! ಸಕಲ ಚರಾಚರವೇ ಬೆಚ್ಚಿಬೀಳುವಂತಹ ಕರ್ಣ ಕಠೋರ ಧ್ವನಿ. ಎರಡು ನಿಮಿಷದ ಹಿಂದೆ ಇದ್ದವನು... ಈಗಿಲ್ಲ. ಸುಟ್ಟು ಬೂದಿಯಾಗಿಬಿಟ್ಟ. ಕಣ್ಣೀರು ಮತ್ತು ಮಳೆನೀರು ಬೆರೆತುಹೋಗುವಂತಹ ನೆನಪುಗಳು!

ಪ್ರಕೃತಿ ಹಿತಕಾರಿಯೇನೂ ಅಲ್ಲ. ಹಾಗಂತ ಕೆಟ್ಟದ್ದೂ ಅಲ್ಲ. ಅದು ಪ್ರಕೃತಿ. ಅದೇ ಅದರ ಪ್ರಕೃತಿ. ಆದರೂ ಅಲವತ್ತುಕೊಳ್ಳುವುದು ನಮ್ಮ ಪ್ರಕೃತಿ.

ನಿಂತು ಹೋಯಿತೇನೋ ಎನ್ನುವಂತೆ ಭಾಸವಾಗುತ್ತಾ, ಮತ್ತೆ ಉಧೃತಿಗೊಳ್ಳುತ್ತಾ, ಎಲ್ಲ ಕೆಲಸಗಳನ್ನು ಬದಿಗಿಟ್ಟು ನನ್ನನ್ನು ಮಾತ್ರವೇ ನೋಡಿರೆನ್ನುವಂತೆ ಮಳೆ ಸುರಿಯುತ್ತಿದೆ, ಬೀಳುತ್ತಿದೆ, ಹೊಡೆಯುತ್ತಿದೆ, ನೀರನ್ನು ಚಿಮ್ಮುತ್ತಿದೆ.

ಪ್ಯಾಂಟುಗಳನ್ನು ಮೇಲೇರಿಸಿಕೊಳ್ಳುತ್ತಾ, ಸೀರೆಯ ನೆರಿಗೆಗಳನ್ನು ಸಾವರಿಸಿಕೊಳ್ಳುತ್ತಾ, ಕರವಸ್ತ್ರಗಳನ್ನು ಹೊದಿಸಿಕೊಳ್ಳುತ್ತಾ, ಕಾಗದಪತ್ರಗಳನ್ನು ಹೊಟ್ಟೆಯೊಳಗೆ ಅಡಗಿಸಿಟ್ಟುಕೊಳ್ಳುತ್ತಾ, ಮಕ್ಕಳನ್ನು ಸುಧಾರಿಸಿಕೊಳ್ಳುತ್ತಾ, 'ಮಳೆಯಲ್ಲಿ ಇದೀನಿ' ಎಂದು ಉತ್ತರಿಸುತ್ತಾ, ಗಾಡಿಗಳನ್ನು ನಿಲ್ಲಿಸುತ್ತಾ, ಕಿರಿದಾದ ಜಾಗದಲ್ಲೇ ತಮ್ಮನ್ನು ತಾವು ಹೊಂದಿಸಿಕೊಳ್ಳುತ್ತಾ, ಭುಜಗಳನ್ನು ಪರಸ್ಪರ ತಾಕಿಸುತ್ತಾ, ಕೈಗಳನ್ನು ಕಟ್ಟಿಕೊಳ್ಳುತ್ತಾ, ನಗಾಡುತ್ತಾ, ಜಗಿದಾಡುತ್ತಾ... ಕಿರಿಯರು, ಹಿರಿಯರು, ಯುವಕರು, ಮುದುಕರು, ಉಳ್ಳವರು, ಉಂಬಲಿಲ್ಲದವರು, ತೆಳುವಾದವರು, ಸ್ಥೂಲಕಾಯದವರು, ಕುಬ್ಜರು, ಉದ್ದಕ್ಕಿರುವವರು, ಹೆಂಗಸರು, ಗಂಡಸರು... ನಿಲ್ಲುತ್ತಾ, ಸಾಗುತ್ತಾ, ನಿಲ್ಲುವುದೋ ನಡೆಯುವುದೋ ಎಂದು ಸಂಶಯಿಸುತ್ತಾ, ಭಾರವಾದ ಹೆಜ್ಜೆಗಳನ್ನು ಹಾಕುತ್ತಾ... ಸ್ವಲ್ಪವೇ ತೊಯ್ದು, ಪೂರ್ತಿಯಾಗಿ ತೊಯ್ದು, ಭುಜದವರೆಗೆ ತೊಯ್ದು, ತಲೆಯಷ್ಟೇ ತೊಯ್ದು, ತೊಯ್ಯಬೇಕೆಂದುಕೊಂಡೇ ತೊಯ್ದು, ತೊಯ್ಯಬಾರದೆಂದುಕೊಂಡರೂ ತೊಯ್ದು...

ತಳ್ಳುಕುರ್ಚಿಯಲ್ಲಿ ಬೇಡಿ ತಿನ್ನುತ್ತಿರುವ ಅಜ್ಜಿ ಮೊಮ್ಮಗಳು ಸಂಪೂರ್ಣವಾಗಿ ನೆನೆದು ಹೋಗಿದ್ದಾರೆ. ಇಡಿಯಾಗಿ ತೊಯ್ದು ಹೋಗಿರುವ ಯುವತಿಯೊಬ್ಬಳ

